## 08-008-2026


VIDYAVARDHAKA SANGHA(R)
MYSURU
VIDYAVARDHAKA SANGHA(R), MYSURU
VIDYAVARDHAKA
FIRST GRADE COLLEGE
Sheshadri Iyer Road, Mysuru – 570 001
VVFGC MYSURU
KNOWLEDGE IS POWER
ESTD. 1976
Talent's Day
SHOW YOUR TALENT, INSPIRE THE WORLD!
DATE
08-08-2026
TIME
10.00 AM
VENUE
Sri.P.M.Chikkaboraiah Hall
Let's Celebrate Creativity, Passion & Performances
DANCE | MUSIC | SINGING | DRAMA | ART | PHOTOGRAPHY & MORE...

# ಕ್ರಿಯಾಶೀಲತೆಯೇ ಬದುಕಿನ ಚೈತನ್ಯ

**- ಡಾ.ಎಸ್.ಮರೀಗೌಡ**

ಕಾಲೇಜು ಜೀವಂತವಾಗಿರಲು ವಿದ್ಯಾರ್ಥಿಗಳಲ್ಲಿ ಕಲೆ ಜೀವಂತವಾಗಿರಬೇಕು. ವಿದ್ಯಾರ್ಥಿಗಳಿಗೆ ವೇದಿಕೆಯ ಭಯವನ್ನು ಹೋಗಲಾಡಿಸಲು, ಆತ್ಮವಿಶ್ವಾಸ, ಸೃಜನಶೀಲತೆ, ಸಹಕಾರ ಮನೋಭಾವ ಮತ್ತು ನಾಯಕತ್ವದ ಗುಣಗಳನ್ನು ಬೆಳೆಸಲು ಪ್ರತಿಭಾ ದಿನಾಚರಣೆಯಂತಹ ಕಾರ್ಯಕ್ರಮಗಳು ಸಹಕಾರಿಯಾಗುತ್ತವೆ ಎಂದು ವಿದ್ಯಾವ ರ್ಧಕ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ಮರೀಗೌಡ ಅಭಿಪ್ರಾಯಪಟ್ಟರು.

ನಗರದ ವಿದ್ಯಾವ ರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಪ್ರಸಕ್ತ ಶೈಕ್ಷಣಿಕ ಸಾಲಿನ ಪ್ರತಿಭಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು. ಪ್ರತಿಭಾ ಅನಾವರಣ ದಿನ ಎಂದರೆ ವಿದ್ಯಾರ್ಥಿಗಳಲ್ಲಿ ಅಡಗಿರುವ ವಿಶೇಷ ಕಲೆ, ಕೌಶಲ್ಯ ಹಾಗೂ ಸೃಜನಶೀಲತೆಯನ್ನು ಹೊರಹಾಕುವ ವಿಶೇಷವಾದ ವೇದಿಕೆಯಾಗಿದೆ. ಇಂತಹ ವಿಶೇಷ ದಿನವನ್ನು ಪ್ರತಿಭಾ ಕಾರಂಜಿ, ಸಾಂಸ್ಕೃತಿಕ ದಿನ, ಪ್ರತಿಭಾ ದಿನಾಚರಣೆ, ಪ್ರ ತಿಭಾ ಅನಾವರಣ ದಿನ ಹೀಗೆ ಹಲವಾರು ಹೆಸರುಗಳಿಂದ ಕರೆಯುತ್ತೇವೆ ಹಾಗೂ ಪ್ರತಿ ಶೈಕ್ಷಣಿಕ ವರ್ಷದಲ್ಲೂ ಈ ಕಾರ್ಯಕ್ರಮವನ್ನು ಆಚರಿಸಿಕೊಂಡು ಬರುತ್ತಿದ್ದೇವೆ. ಪ್ರತಿಯೊಬ್ಬ ವಿದ್ಯಾರ್ಥಿಗಳಲ್ಲು ಒಂದಲ್ಲ ಒಂದು ರೀತಿಯ ವಿಶೇಷ ಪ್ರತಿಭೆಯು ಅಡಕವಾಗಿರುತ್ತದೆ, ಅದು ಅವರಿಗೆ ತಿಳಿದಿರುವುದಿಲ್ಲ. ವಿದ್ಯಾರ್ಥಿಗಳ ಸುಪ್ತ ಪ್ರ ತಿಭೆಗಳನ್ನು ಅನಾವರಣಗೊಳಿಸುವ ನಿಟ್ಟಿನಲ್ಲಿ ಈ ವೇದಿಕೆಯು ಸಹಕಾರಿಯಾಗಿದೆ. ಪ್ರತಿಭಾ ದಿನಾಚರಣೆಯಿಂದಾಗಿ ವಿದ್ಯಾರ್ಥಿಗಳಿಗೆ ತಮ್ಮ ವಿವಿಧ ಕೌಶಲ್ಯಗಳನ್ನು ಪ್ರದರ್ಶಿಸಲು ಅವಕಾಶ ಕಲ್ಪಿಸಿಕೊಡಲಾಯಿತು. ಹಾಡು, ನೃತ್ಯ, ಭಾಷಣ, ಕವನ ವಾಚನ, ಚರ್ಚಾಸ್ಪರ್ಧೆ, ಚಿತ್ರಕಲೆ, ರಂಗೋಲಿ ಸ್ಪರ್ಧೆ, ನಟನೆ, ಸಂಗೀತ ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಉತ್ಸಾಹದಿಂದ ಪಾಲ್ಗೊಂಡು ಪ್ರ ತಿಯೊಬ್ಬ ವಿದ್ಯಾರ್ಥಿಯು ತನ್ನಲ್ಲಿರುವ ವಿಶೇಷ ಪ್ರತಿಭೆಗಳನ್ನು ಆತ್ಮವಿಶ್ವಾಸದಿಂದ ಪ್ರ ದರ್ಶಿಸಿದರು.

ಕಾರ್ಯಕ್ರಮದಲ್ಲಿ ಅಧ್ಯಾಪ ಕರು, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದರು. ವಾಣಿಜ್ಯಶಾಸ್ತ್ರ ವಿಭಾಗದ ಶ್ರೀ.ಚಂದನ್.ವಿ ಸ್ವಾಗತಿಸಿ, ನಿರೂಪಿಸಿದರು ಮತ್ತು ಅಧ್ಯಾಪಕ ಸಲಹೆಗಾರ ಶ್ರೀ.ಶಶಿಧರ್.ಎಸ್ ವಂದಿಸಿದರು.


VIDYAVARDHAKA SANGHA(R), MYSURU
VIDYAVARDHAKA FIRST GRADE COLLEGE
Sheshadri Iyer Road, Mysuru – 570 001
Talent's Day










GLOW UP



















